ಕೈಲಾಸವಾಸ ಗೌರೀಶ ಈಶ
ತೈಲಧಾರೆಯನ್ತೆ ಮನಸು ಕೊಡೋ ಹರಿಯಲ್ಲಿ ‖ ಪ ‖

ಅಹೋರಾತ್ರಿಯಲಿ ನಾನು ಅನುಜರಾಗ್ರಣಿಯಾಗಿ
ಮಹಿಯೊಳಗೆ ಚರಿಸಿದೆನೋ ಮಹಾದೇವನೆ
ಅಹಿಭೂಷಣನೆ ಎನ್ನ ಅವಗುಣಗಳ ಎಣಿಸದಲೆ
ವಿಹಿತ ಧರ್ಮದಿ ವಿಷ್ಣು ಭಕುತಿಯನು ಕೊಡೋ ಶಮ್ಭೋ ‖

ಮನಸು ಕಾರಣವಲ್ಲ ಪಾಪಪುಣ್ಯಕ್ಕೆಲ್ಲ
ಅನಲಾಕ್ಷ ನಿನ್ನ ಪ್ರೇರಣೆಯಿಲ್ಲದೆ
ದನುಜ ಗಜಮದ ವೈರಿ ದನ್ಡ ಪ್ರಣಾಮಮಾಳ್ಪೆ
ಮಣಿಸೋ ಈ ಶಿರವ ಸಜ್ಜನ ಚರಣ ಕಮಲದಲಿ ‖

ಭಾಗೀರಥೀಧರನೇ ಭಯವ ಪರಿಹರಿಸಯ್ಯ
ಲೇಸಾಗಿ ನೀ ಸಲಹೋ ಸತತ ಸರ್ವದೇವಾ
ಭಾಗವತಜನ ಪ್ರಿಯ ವಿಜಯ ವಿಠಲನ್ಪ್ರಿ
ಜಾಗು ಮಾಡದೆ ಭಜಿಪ ಭಾಗ್ಯವನು ಕೊಡೋ ಶಮ್ಭೋ ‖